ದಿ: 6-10-2016 ರಂದು ಸಾಕ್ಷಿಧಾರರನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

ಮುಂದುವರೆದ ಮುಖ್ಯ ವಿಚಾರಣೆ : ಪ್ರತಿವಾದಿ ಪರ ವಕೀಲರಿಂದ

ನನ್ನ ಮುಖ್ಯ ವಿಚಾರಣೆಯ ಸಾಕ್ಷಿಯನ್ನು ಪ್ರಮಾಣ ಪತ್ರದ ಮೂಲಕ ಸಲ್ಲಿಸಿದ್ದು ಅದರ ಸಂಗತಿಗಳೆಲ್ಲ ಸತ್ಯವಿರುತ್ತವೆ. ಅದನ್ನು ನಾನೇ ಹೇಳಿ ಬರೆಯಿಸಿದ್ದು ಅದರಲ್ಲಿ ನನ್ನ ಸಹಿ ಇರುತ್ತದೆ. ಪ್ರಮಾಣ ಪತ್ರವನ್ನು ನನ್ನ ಮುಖ್ಯ ವಿಚಾರಣೆಯ ಸಾಕ್ಷ್ಯವನ್ನಾಗಿ ಪರಿಗಣಿಸಬೇಕೆಂದು ಪ್ರಾರ್ಥಿಸುತ್ತೇನೆ.

ದಿನಾಂಕ 26-4-1948 ರ ಖರೀದಿ ಪತ್ರ ನಿ ಡಿ 1, ದಿನಾಂಕ 15-6-1949 ರ ಖರೀದಿ ಪತ್ರ ನಿ ಡಿ 2, ದಿನಾಂಕ 3-1-1956 ರ ಭಕ್ಷಿಸ್ ಪತ್ರ ನಿ ಡಿ 3, ಮುಟೇಷನ್ ಆದೇಶ ನಿ ಡಿ 4, 3-7-1987 ರ ಖರೀದಿ ಪತ್ರ ನಿ ಡಿ 5, ಕೆ ಡಿ ಪಿ ನಕಲು ನಿ ಡಿ 6 ಅಂತಾ ಗುರುತಿಸಲಾಯಿತು.

(ಪ್ರತಿವಾದಿ ಪರ ವಕೀಲರು ಮುಂದುವರೆದ ಮುಖ್ಯ ವಿಚಾರಣೆಗೆ ಸಮಯ ಕೋರಿದ್ದರಿಂದ ಮುಂದೂಡಲಾಯಿತು)

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು).

ನ. ಸ. ಓ ಹೇ ಕೆ ಸರಿ ಇದೆ
ಎಂದು ಒಪ್ಪಿರುತ್ತಾರೆ

ಹಿರಿಯ ಸಿವಿಲ್ ನ್ಯಾಯಾಧೀಶರು
ಹಾನಗಲ್